**ಸಾಕ್ಷಿಗೆ ದಿನಾಂಕಃ 05.10.2023 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃಪ್ರತಿವಾದಿ 5(a) ರಿಂದ (e), 10 ಮತ್ತು 11 ರವರ ಪರಃ ಶ್ರೀ.ಎಸ್ ಜಿ ಎಂ ವಕೀಲರಿಂದ ಃ**

ನನಗೆ 18.03.1983 ರಂದು ಮದುವೆಯಾಗಿರುತ್ತದೆ. ನನ್ನ ತಂದೆ 1974 ರಲ್ಲಿ ತೀರಿಕೊಂಡಿದ್ದು, ನಮ್ಮ ಆಸ್ತಿಯನ್ನು 1980 ನೇ ಇಸವಿಯಲ್ಲಿ ವಿಭಾಗವಾಗುವವರೆಗೂ ನಮ್ಮ ತಾಯಿಯೇ ನೋಡಿಕೊಂಡಿರುತ್ತಾರೆ. ನನ್ನ ತಾಯಿಯು ಇನ್ನು ನನಗೆ ಆಸ್ತಿಯನ್ನು ನೋಡಿಕೊಳ್ಳಲು ಆಗುವುದಿಲ್ಲ ಎಂದು ಹೇಳಿ 1980 ರಲ್ಲಿ ವಿಭಾಗ ಮಾಡಿಕೊಟ್ಟಿರುತ್ತಾರೆಂದರೆ ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. 1980 ಇಸವಿಯ ನಂತರ ಅಂದರೆ ವಿಭಾಗವಾದ ನಂತರ 6 ನೇ ಪ್ರತಿವಾದಿ ಬೇರೆಯಾಗಿ ವಾಸ ಮಾಡುತ್ತಿರುತ್ತಾರೆಂದರೆ ಸಾಕ್ಷಿಯು ವಿಭಾಗವಾದ ಬಗ್ಗೆ ನನಗೆ ತಿಳಿದಿಲ್ಲ, ಆದರೆ ಅವರು 1980 ನೇ ಇಸವಿಯ ನಂತರದಿಂದ ಬೇರೆ ವಾಸ ಮಾಡುತ್ತಿರುತ್ತಾರೆ ಎಂದು ನುಡಿದಿರುತ್ತಾರೆ. ವಿಭಾಗವಾದ ಕಾರಣಕ್ಕೇ ಪ್ರತಿವಾದಿ 6 ರವರು ಬೇರೆ ವಾಸ ಮಾಡುತ್ತಿರುತ್ತಾರೆಂದರೆ ಸಾಕ್ಷಿಯು ನಾನು ಬೇರೆ ಊರಿನಲ್ಲಿ ಇದ್ದೆ ಆ ಕಾರಣ ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನಿಪಿ-2 ವಿಭಾಗ ಪತ್ರದ ಪ್ರಕಾರ ನನ್ನ ತಾಯಿ ಎಲ್ಲರಿಗಿಂತ ಜಾಸ್ತಿ ಆಸ್ತಿಯನ್ನು ಹೊಂದಿದ್ದರು ಎಂದರೆ ಸರಿ, ಸಾಕ್ಷಿ ಮುಂದುವರೆದು ನನಗೆ ವಿಭಾಗ ಪತ್ರವನ್ನು 2017 ರಲ್ಲಿ ನೋಡಿದಾಗಲೇ ಆ ವಿಷಯ ತಿಳಿದು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ವಿಭಾಗಪತ್ರವಾಗುವ ಸಮಯದಲ್ಲಿ ನನ್ನ ತಂದೆ ಬದುಕಿದ್ದರೆ ಸದರಿ ನನ್ನ ತಾಯಿಗೆ ಹೋಗಬೇಕಿದ್ದ ಆಸ್ತಿ ನನ್ನ ತಂದೆ ಹೆಸರಿನಲ್ಲೇ ಉಳಿಯುತ್ತಿತ್ತು ಎಂದರೆ ಸರಿ. ನನ್ನ ತಂದೆಗೆ ಸೇರಬೇಕಾದ ಆಸ್ತಿ ನನ್ನ ತಾಯಿ ಹೆಸರಿಗೆ ಹೋಗಿದೆ ಎಂದರೆ ಸಾಕ್ಷಿಯು ಕಾನೂನು ಪ್ರಕಾರ ಹೋಗಿರುತ್ತದೆ ಅದರ ಬಗ್ಗೆ ನನಗೆ ಅಷ್ಟು ಮಾಹಿತಿ ಇರುವುದಿಲ್ಲ. ನನ್ನ ತಂದೆ ಬದುಕಿದ್ದರೆ ನನ್ನ ತಾಯಿಗೆ ಆಸ್ತಿ ಹೋಗುವ ಸಂಭವ ಇರುತ್ತಿರಲಿಲ್ಲ ಎಂದರೆ ಸಾಕ್ಷಿಯು ನನಗೆ ಅದಕ್ಕೆ ಸಂಬಂಧಪಟ್ಟ ಕಾನೂನಿನ ಬಗ್ಗೆ ಅಷ್ಟು ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.

5 ನೇ ಪ್ರತಿವಾದಿಯವರು ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು, ಸದರಿ ಇಲಾಖೆಯಲ್ಲಿ ಉಪ ತಹಶೀಲ್ದಾರ್ ಆಗಿ ನಿವೃತ್ತಿ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮದುವೆಯಾಗುವ ಸಮಯದಲ್ಲಿ ಅವರು ಗ್ರಾಮ ಲೆಕ್ಕಿಗರು ಆಗಿ ಕೆಲಸ ಮಾಡುತ್ತಿದ್ದರು ಎಂದು

ನುಡಿದಿರುತ್ತಾರೆ. ನಿಪಿ-1 ರಲ್ಲಿರುವ ಬರವಣಿಗೆಗಳು ಸತ್ಯದಿಂದ ಕೂಡಿರುತ್ತವೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. 1980 ನೇ ಇಸವಿಯಲ್ಲಿ ಅಡಿಕೆ ಒಳ್ಳೆ ಬೆಲೆ ಇರಲಿಲ್ಲ ಎಂದರೆ ಸಾಕ್ಷಿಯು ನಾನು ಆಗ ವಿದ್ಯಾರ್ಥಿಯಾಗಿದ್ದೆ , ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ.

ನನ್ನ ತಾಯಿ ಹಾಗೂ 5 ನೇ ಪ್ರತಿವಾದಿಯವರು ನನ್ನ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನ ತಂದೆ ತೀರಿಕೊಂಡ ನಂತರ ನಮ್ಮ ಕುಟುಂಬ ನಿರ್ವಹಣೆಗಾಗಿ ಸಾಲ ಆಗಿದ್ದು, ಸದರಿ ಸಾಲವನ್ನು 5 ನೇ ಪ್ರತಿವಾದಿಯವರೇ ತೀರಿಸಬೇಕೆಂದು ನಿಪಿ-2 ವಿಭಾಗಪತ್ರದಲ್ಲಿ ನಮೂದಾಗಿತ್ತು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ-2 ವಿಭಾಗಪತ್ರದಂತೆ ನನ್ನ ತಾಯಿಗೆ ಬಂದಂತಹ ದಾವಾ ಅನುಸೂಚಿಯಲ್ಲಿ ತೋರಿಸಿರುವ ಸರ್ವೆ ನಂಃ 72 ರ ಜಮೀನುಗಳನ್ನು ಅವರು ಸುಮಾರು 25 ವರ್ಷಗಳ ಹಿಂದೆಯೇ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಸದರಿ ವಿಷಯ ನನಗೆ 2017 ರಲ್ಲಿ ಗೊತ್ತಾಗಿರುತ್ತದೆ. ಪ್ರತಿವಾದಿ 5 ಮತ್ತು 6 ರವರು ಸಹ ಸದರಿಯವರಿಗೆ ಬಂದಂತಹ ಜಮೀನುಗಳ ಪೈಕಿ ದಾವಾ ಅನುಸೂಚಿಯಲ್ಲಿ ತೋರಿಸಿರುವ ಸರ್ವೆ ನಂಃ 72 ರ ಜಮೀನನ್ನು ಸುಮಾರು 25 ವರ್ಷಗಳ ಹಿಂದೆಯೇ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಆ ಸಮಯದಲ್ಲಿ ದೆಹಲಿಯಲ್ಲಿ ವಾಸವಾಗಿದ್ದೆ, ಅದರಿಂದ ಅದರ ಬಗ್ಗೆಯೂ ಸಹ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿರುತ್ತಾರೆ.

ನನ್ನ ತಾಯಿ 1991 ಜುಲೈ 16 ರಂದು ತೀರಿಕೊಂಡಿರುತ್ತಾರೆ. ಸುಂಕದಮಕ್ಕಿ ಗ್ರಾಮದ ಸರ್ವೆ ನಂಃ 72 ರಲ್ಲಿ ದಾವಾ ಅನುಸೂಚಿ ಐಟಂ ನಂಃ 1 ರ ಸ್ವತ್ತು ಇವತ್ತಿಗೂ ಕೂಡ ನನ್ನ ತಾಯಿ ಹೆಸರಿನಲ್ಲಿರುತ್ತದೆ ಎಂದರೆ ಸರಿ. ನನಗೆ ದಾವಾ ಅನುಸೂಚಿ ದಾವಾ ಐಟಂ ನಃ 1 ರಲ್ಲಿ ಮಾತ್ರ ಹಕ್ಕು ಇರುತ್ತದೆ ಬೇರೆ ದಾವಾ ಅನುಸೂಚಿಯಲ್ಲಿ ತೋರಿಸಿರುವ ಬೇರೆ ಯಾವುದೇ ಜಮೀನಿನಲ್ಲಿ ನನಗೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 1980 ರಲ್ಲಿ ನಮ್ಮ ಕುಟುಂಬದಲ್ಲಿ ವಿಭಾಗ ಆಗಿದ್ದು, ಪ್ರತಿವಾದಿ 6 ರವರು ಬೇರೆಯಾಗಿ ವಾಸವಾಗಿದ್ದು ಎಲ್ಲ ವಿಷಯಗಳು ನನಗೆ ಗೊತ್ತಿದ್ದರೂ ಸಹ ಈ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನಾನು ವಿದ್ಯಾರ್ಥಿಯಾಗಿದ್ದು ಹಾಗೂ ನಾನು ಹೆಣ್ಣು ಮಗಳು

ಆದ ಕಾರಣ ನನಗೆ ಮಾಹಿತಿ ಇರಲಿಲ್ಲ ಮತ್ತು ಇಂತಿಂಥವರಿಗೆ ಇಂತಿಷ್ಟು ಜಮೀನುಗಳು ಹೋಗಬಹುದು ಎಂದು ಊಹಾಪೋಹಾ ಇತ್ತು ಎಂದು ನುಡಿದಿರುತ್ತಾರೆ.

ನನ್ನ ತಾಯಿ ಹಾಗೂ ನನಗೂ ಅವರು ತೀರಿಕೊಳ್ಳುವವರೆಗೂ ಒಡನಾಟ ಚೆನ್ನಾಗಿಯೇ ಇತ್ತು. ಪ್ರತಿವಾದಿ 5 ಮತ್ತು 6 ರವರ ಜೊತೆ 2015 ರವರೆಗೂ ಒಳ್ಳೆಯ ಒಡನಾಟ ಇತ್ತು. 2015 ರ ನಂತರ ಸಹ ನನ್ನ ಸಹೋದರರ ಜೊತೆ ನನಗೆ ಯಾವುದೇ ದ್ವೇಷ ಇರಲಿಲ್ಲ. 6 ನೇ ಪ್ರತಿವಾದಿ ಸುಮಾರು 40 ವರ್ಷಗಳಿಂದ ನೆಮ್ಮಾರು ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನಾನು ನನಗೆ ಹಕ್ಕು ಇಲ್ಲದೇ ಇರುವಂತಹ ಆಸ್ತಿಗಳನ್ನು ಪಡೆದುಕೊಳ್ಳುವ ದುರುದ್ದೇಶದಿಂದ ಪ್ರಸ್ತುತ ಸುಳ್ಳು ದಾವೆಯನ್ನು ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿ 5, 6 ಮತ್ತು 9 ನೇ ಪ್ರತಿವಾದಿಯ ಗಂಡ ರವರಿಗೆ ವಿಭಾಗ ಪತ್ರದ ಮೂಲಕ ಹೋದ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಉಳಿದ ಪ್ರತಿವಾದಿಗಳ ಪರ ವಕೀಲರಿಂದ ಃ</u>

ಸಮಯ ಕೋರಿದ ಮೇರೆಗೆ ಪಾಟೀ ಸವಾಲು ಮೂಂದೂಡಲಾಯಿತು.

**(ದಿನಾಂಕಃ 05.10.2023 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾ.ದಂಃ ಶೃಂಗೇರಿ**

**ಸಾಕ್ಷಿ ಸಹಿಃ**